O.S.No.419/2017
PW -4

ದಿನಾಂಕ 19/07/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು

**ಪಾಟೀ ಸವಾಲು :- ಶ್ರೀ ಪಿ.ಸಿ.ಕೆ.ಆರ್. ಪ್ರತಿವಾದಿ ಪರ ವಕೀಲರಿಂದ**

ನಾವು 4 ಜನ ಅಣ್ಣ ತಮ್ಮಂದಿರು. ನಮ್ಮ ತಂದೆ ಹೆಸರು ಪಾಪಯ್ಯ. 6 ನೇ ಪ್ರತಿವಾದಿಯ ಪರಿಚಯ ಇರುತ್ತದೆ. ನನಗೂ ಮತ್ತು 6 ನೇ ಪ್ರತಿವಾದಿ ಮದ್ಯೆ ನಿವೇಶನದ ಸಂಬಂಧ ವ್ಯಾಜ್ಯ ಇತ್ತು ಎಂದರೆ ಸರಿ. ಸದರಿ ದಾವಾ ಸಂಖ್ಯೆ-253/1987 ಎಂದರೆ ಸರಿ. ಸದರಿ ದಾವೆ 6 ನೇ ಪ್ರತಿವಾದಿ ಪರ ಆಗಿ ಅವರು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯಿಂದ ನಮ್ಮ ಜಮೀನು ದೂರದಲ್ಲಿರುತ್ತದೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಕ್ರಯ ಪತ್ರದ ದಾಖಲೆ ನೋಡಿರುವುದಿಲ್ಲ. ಸದರಿ ಆಸ್ತಿ ಮೂರು ಜನರ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿ ಮೂರು ಜರನ ಹೆಸರಿನಲ್ಲಿರುತ್ತದೆ. ಈಗ ಕ್ರಯ ಪತ್ರ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನಾನು ನೋಡಿರುವುದಿಲ್ಲ. ದಾವಾ ಆಸ್ತಿ ಚಕ್ಕುಬಂದಿ ಪೂ-ತಿಮ್ಮಯ್ಯನ ಜಮೀನು , ಪ-ಹಳ್ಳ , ಉ-ತಿಮ್ಮಯ್ಯ ರವರ ಜಮೀನು ಮತ್ತು ದ-ಬೆಟ್ಟ ಇರುತ್ತದೆ. ದಾವಾ ಆಸ್ತಿಯ ವಿಸ್ತಿರ್ಣ ಎಷ್ಟು ಇದೆ ಎಂದು ಹೇಳಲು ಆಗುವುದಿಲ್ಲ. ದಾವಾ ಆಸ್ತಿ ಗೋಪಾಲಪ್ಪನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೂರು ಜನರ ಹೆಸರಿನಲ್ಲಿ ತೆಗೆದುಕೊಂಡಿರುತ್ತಾರೆಂದು ಉತ್ತರಿಸಿರುತ್ತಾರೆ. ಮೂರು ಜನರ ಹೆಸರಿನಲ್ಲಿ ಖಾತೆ ಪಹಣಿ ಆಗಿರುತ್ತದೆ. ಮೂರು ಜನಕ್ಕೆ ಖಾತೆ ಪಹಣಿ ಇರುವ ಬಗ್ಗೆ ವಿಭಾಗ ಪತ್ರದಲ್ಲಿ ಬರೆದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಇರುವುದಿಲ್ಲ, ಸದರಿ ಆಸ್ತಿ ಗೋಪಾಲಪ್ಪನ ಸ್ವಯಾರ್ಜಿತ ಆಸ್ತಿ ಆಗಿದ್ದು ಅವರ ಮರಣಾ ನಂತರ ಅವರ ಮಗನ ಹೆಸರಿನಲ್ಲಿ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಈಗ ದಾವಾ ಆಸ್ತಿಯನ್ನು 6 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾನೆ ಎಂದರೆ ಸರಿಯಲ್ಲ. ಜಂಟಿ ಕ್ರಯ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಹಾಕಿರುವುದಿಲ್ಲ. ದಾವಾ ಆಸ್ತಿಯನ್ನು ಒರಳಪ್ಪ ರವರ ಕಡೆಯಿಂದ ಖರೀದಿಸಿರುತ್ತಾರೆ.

2. ಸದರಿ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ , ಆದರೆ ಎಷ್ಟು ಮೊತ್ತಕ್ಕೆ ತೆಗೆದುಕೊಂಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿ ಮಾತುಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಗೋಪಾಲಪ್ಪನ ನಡುವೆ ವ್ಯಾಜ್ಯ ಇದ್ದ ಕಾರಣ ಆ ದ್ವೇಷದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಅಂದಿನಿಂದ ಇಲ್ಲಿಯವರೆಗೂ 6 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದು ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಯಾವುದೇ ಆಸ್ತಿ ಭಾಗ ಆಗುವುದು ಇರುವುದಿಲ್ಲ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಯನ್ನು ಅವರವರೇ ಭಾಗ ಮಾಡಿಕೊಂಡು ಅವರವರವೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ